


# 'ಸುಧಾ' ಜೊತೆಗಿನ ಓದುಗರ ಒಡನಾಟ

### 'ಸುಧಾ'ಗೆ ಕಾತರದಿಂದ ಕಾಯುತ್ತಿದ್ದೆ...

ನಮ್ಮ ಮನೆಯಲ್ಲಿ ಎಲ್ಲರೂ ಒಳ್ಳೆಯ ಓದುಗರು. ಮನೆಗೆ ದಿನಪತ್ರಿಕೆಗಳು, ವಾರಪತ್ರಿಕೆಗಳು ಬರುತ್ತಿದ್ದವು. ಆದರೆ 'ಸುಧಾ' ಇಲ್ಲದಿದ್ದರೆ ಓದು ಪೂರ್ಣವಾಗುತ್ತಲೇ ಇರಲಿಲ್ಲ. ಅದರಲ್ಲೂ ಬೆಸುಗೆ, ಕಾಮನಬಿಲ್ಲು, ಹೊಂಬಿಸಿಲು, ಶಬ್ದಗಳು ಹೀಗೆ ಹಲವಾರು ಧಾರಾವಾಹಿಗಳು ನಮ್ಮನ್ನು 'ಸುಧಾ'ಳ ಬರುವಿಗಾಗಿ ತುದಿಗಾಲಲ್ಲಿ ಕಾಯುವಂತೆ ಮಾಡುತ್ತಿದ್ದವು. ಒಂದು ವಾರ ತಪ್ಪಿದರೂ ಏನೋ ಕಳೆದುಕೊಂಡಂತೆ. ಒಳ್ಳೆಯ ಲೇಖನಗಳು, ಪ್ರಬಂಧಗಳು, ಮಕ್ಕಳ ಕಥನಗಳು, ಧಾರಾವಾಹಿಗಳು, ಪ್ರವಾಸ ಕಥನಗಳ ಮೆರವಣಿಗೆ ಹೀಗೇ ಮುಂದುವರೆಯುತ್ತಿರಲಿ.

—ವೀಣಾ ರಮೇಶ್, ಬೆಂಗಳೂರು

### ಅಮೃತಧಾರೆ

ನಾವಿದ್ದಿದ್ದು ತಮಿಳುನಾಡಿನ ಗಡಿಭಾಗದ ತಾಳವಾಡಿ ಎಂಬಲ್ಲಿ. ನಮ್ಮ ಶಾಲಾ ದಿನಗಳಲ್ಲಿ ನಮ್ಮ ತಂದೆ ತಾಯಿ ತರಿಸಿ ಓದುತ್ತಿದ್ದುದು ಮಲೆಯಾಳಂ, ತಮಿಳು ವಾರಪತ್ರಿಕೆಗಳನ್ನು. ಅದನ್ನೇ ನಾವು ಮಕ್ಕಳು ಓದುತ್ತಿದ್ದೆವು.

ನೌಕರಿ ಸೇರಿದ ಮೇಲೆ 'ಸುಧಾ' ಜೊತೆಯಾದಳು. ಪದಬಂಧ, ಕಥೆ, ಧಾರಾವಾಹಿ ಎಲ್ಲವನ್ನು ನಾನು ಓದುತ್ತೇನೆ. ನನ್ನ ಮೊಮ್ಮಗನಿಗೂ 'ಎಳೆಯರ ಅಂಗಳ' ಇಷ್ಟ. ನಾನೀಗ ನಿವೃತ್ತಿ ಹೊಂದಿರುವೆ. ನನಗೀಗ ಜೊತೆಯಾಗಿರುವಳು 'ಸುಧಾ'.

ಜ್ಞಾನಭಂಡಾರದ ಒಡತಿಯಾಗಿ ಸದಾ 'ಸುಧಾ' ಅಮೃತಧಾರೆಯಾಗಲಿ.

—ಸಿ. ಸರಳಾಮಣಿ, ಮೈಸೂರು

### ಒದಿಗೆ ಧಾರಾವಾಹಿ ಪ್ರೇರಣೆ

ನಾನು 'ಸುಧಾ' ಓದಲು ಪ್ರಾರಂಭಿಸಿದ್ದು 'ಎಡಕಲ್ಲು ಗುಡ್ಡದ ಮೇಲೆ' ಧಾರಾವಾಹಿ ಆರಂಭವಾದಾಗ. ಈಗ ನನಗೆ 71 ವರ್ಷ. 60 ವರ್ಷದ 'ಸುಧಾ' ಇಂದಿಗೂ ನನ್ನ ನೆಚ್ಚಿನ ವಾರಪತ್ರಿಕೆಯಾಗಿಯೇ ಉಳಿದುಬಂದಿದೆ.

—ನಾಗರತ್ನ, ಬೆಂಗಳೂರು

### ಮನ ತುಂಬುವ ನೆನಪುಗಳು

'ಸುಧಾ'ದಲ್ಲಿ ಪ್ರಕಟವಾಗುತ್ತಿದ್ದ ಲೇಖನ ಮಾಲೆಗಳನ್ನು, ಕಾದಂಬರಿಗಳನ್ನು ಸಂಗ್ರಹಿಸಿದ್ದೇನೆ. ಸ್ಥಳಗಳ ಪರಿಚಯ, ಸಾಹಿತ್ಯ ಮತ್ತು ಚಿತ್ರಕಲೆಗಳ ಕುರಿತು ಸ್ವಾರಸ್ಯಕರ ಲೇಖನಗಳು, ಹೊರನಾಡ ಕನ್ನಡಿಗರ ಕುರಿತ ಲೇಖನಗಳು, ಜಿ.ಪಿ. ರಾಜರತ್ನಂ ಅವರ ಸ್ನೇಹದ ಕಥೆಗಳು, ಸತ್ಯಕಾಮರವರ ಲೇಖನಮಾಲೆ, ಹುಬ್ಳೀಕರ್‌ರವರ ರೇಖಾಚಿತ್ರಗಳು ಇಂದಿಗೂ ಕಣ್ಣಿಗೆ ಕಟ್ಟಿದಂತಿವೆ.

ಹಲವು ಕಾದಂಬರಿಗಳು 'ಸುಧಾ'ಳ ಮೌಲ್ಯ ಹೆಚ್ಚಿಸಿದ್ದವು. ಕಾಮಧೇನು, ಹೊಸರುಚಿ, ಆರೋಗ್ಯವೇ ಭಾಗ್ಯ, ಕಿವಿಮಾತು, ರಂಗೋಲಿ, ವಾರದ ವ್ಯಕ್ತಿ, ನಾದಮಂಜರಿ, ಬಣ್ಣದ ಬದುಕು, ವಿಜ್ಞಾನಲೋಕ, ನಾವು 'ಸುಧಾ'ಳನ್ನು ಕುತೂಹಲದಿಂದ ನಿರೀಕ್ಷಿಸುವಂತೆ ಮಾಡುತ್ತಿದ್ದವು.

ಅಂದು 'ಸುಧಾ' ನನ್ನಲ್ಲಿ ಬಿತ್ತಿದ ಓದುವ, ಬರೆಯುವ ಬೀಜ ಇಂದು ಮರವಾಗಿ ಬೆಳೆದಿದೆ. ನಾನು ಲೇಖಕಿಯಾಗಿರುವುದಕ್ಕೆ 'ಸುಧಾ'ಳೇ ಕಾರಣ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

—ಡಾ. ಗೀತಾ ಸೀತಾರಾಂ

### 'ಸುಧಾ' ಅಂದರೆ ಇಷ್ಟ

'ಸುಧಾ' ಓದುಗರಲ್ಲಿ ನಾನೂ ಒಬ್ಬ ಎನಲು ನನಗೆ ಹೆಮ್ಮೆ. ಕಣ್ಣಿಗೆ ಕನ್ನಡಕ, ಬದುಕಿನ ತಾಕಲಾಟ, ಆತುರದ ಓಟ... ಇವೆಲ್ಲದರ ನಡುವೆಯೂ ಗುರುವಾರ 'ಸುಧಾ' ಬರುವುದೇ ದೊಡ್ಡ ಸಂತಸ. ನಮ್ಮ ಮನೆ ಮಂದಿಗೂ 'ಸುಧಾ' ಬಹಳ ಇಷ್ಟ.

—ರಾಜಶೇಖರ ಹಾದಿಮನಿ, ಧಾರವಾಡ

### ಲಲಿತ ಸಾಹಿತ್ಯದ ರಸಮಂಜರಿ

60 ವರ್ಷಗಳ ಹಿಂದೆ, ವಾರಪತ್ರಿಕೆಗೆ ಹೆಸರು ಸೂಚಿಸಿ ಎಂದು 'ಪ್ರಜಾವಾಣಿ'ಯಲ್ಲಿ ಕೇಳಿದಾಗ, ನಾನೊಂದು ಹೆಸರು ಸೂಚಿಸಿದ್ದೆ. ಆದರೆ, ಆ ಹೆಸರಿನ ಬದಲಾಗಿ, ಇಟ್ಟ 'ಸುಧಾ' ಹೆಸರು ಬಹಳ ಸರಳವಾಯಿತು ಎಂದೆನ್ನಿಸಿದರೂ, ನವೀನ ಮಾದರಿಯ ಬರಹಗಳ ಸುಧೆಯೇ ಪ್ರತಿವಾರ ಮನೆ ಬಾಗಿಲ ಬಳಿಗೆ ಬರಲಾರಂಭಿಸಿದಾಗ ಸಂಭ್ರಮಪಟ್ಟವರಲ್ಲಿ ನಾನೂ ಒಬ್ಬ.

ಆಗ ಪ್ರಕಟವಾಗುತ್ತಿದ್ದ ಎಚ್ಚೆಸ್ಕೆ ವಿರಚಿತ ಪ್ರಚಲಿತ ವಿದ್ಯಮಾನಗಳ ಬರಹ ಉತ್ತಮ ಮಟ್ಟದ್ದಾಗಿರುತ್ತಿತ್ತು. ವಾರದ ವ್ಯಕ್ತಿ ವಿಭಾಗವೂ ಬಹಳ ಕುತೂಹಲಭರಿತವಾಗಿತ್ತು.

ಇಂತಹ ಗಂಭೀರ ಬರಹಗಳು 'ಸುಧಾ' ಪತ್ರಿಕೆಯ ವಿಶೇಷವಾಗಿತ್ತು. ಈಗಲೂ ಅದೇ ಉನ್ನತ ಮಟ್ಟ ಕಾಪಾಡಿಕೊಂಡು ಬರುತ್ತಿದೆ. ನಂತರದ ವರ್ಷಗಳಲ್ಲಿ ನನ್ನ ಒಂದೆರಡು ಲೇಖನಗಳೂ ಪ್ರಕಟವಾಗಿ, 'ಸುಧಾ' ಲೇಖಕ ಕುಟುಂಬ ಸೇರಿದ್ದಕ್ಕೆ ಹೆಮ್ಮೆಯಾಗುತ್ತಿತ್ತು.

ಈಗಂತೂ 'ಸುಧಾ' ಲಲಿತ ಸಾಹಿತ್ಯದ ರಸಮಂಜರಿ, ವಸ್ತುವೈವಿಧ್ಯಕ್ಕೆ ಹೆಸರಾಗಿದೆ. ಎಂದಿಗೂ ಹೀಗೇ ಕನ್ನಡದ ಮನೆ, ಮನ ಬೆಳಗುತ್ತಿರಲಿ ಎಂಬುದೇ ನನ್ನ ಮನದಾಸೆ.

—ಪ್ರೊ. ಎಂ.ಎಸ್. ರಘುನಾಥ್, ಬೆಂಗಳೂರು

### 5 ದಶಕಗಳ ಅಪೂರ್ವ ಸಂಗ್ರಹ

ಕೊಡಗು ಜಿಲ್ಲೆಯ ಚೆಟ್ಟಳ್ಳಿಯ ವೀಣಾ ಎಸ್ಟೇಟ್ ಮಾಲೀಕ ಎಚ್.ಎಸ್. ತಿಮ್ಮಪ್ಪಯ್ಯ ಅವರ ಮನೆಯಲ್ಲಿ 'ಸುಧಾ' ವಾರಪತ್ರಿಕೆಯ 56 ವರ್ಷಗಳ ಸಂಗ್ರಹವಿದೆ. 3000ಕ್ಕೂ ಅಧಿಕ 'ಸುಧಾ' ಪತ್ರಿಕೆಯನ್ನು ತಿಮ್ಮಪ್ಪಯ್ಯ ಅವರು ತಮ್ಮ ಮನೆಯಲ್ಲಿ ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದಾರೆ. ಬಹುತೇಕ ಸಂಚಿಕೆಗಳಿಗೆ ಸುಭದ್ರವಾಗಿ ರಟ್ಟಿನ ಬೈಂಡ್ ಮಾಡಲಾಗಿದೆ.

ಮಳೆ, ಚಳಿಯ ವಾತಾವರಣದಲ್ಲಿ ಕೊಡಗಿನಲ್ಲಿ ಪತ್ರಿಕೆಗಳನ್ನು ಸುದೀರ್ಘ ಕಾಲ ಸಂರಕ್ಷಿಸಿಡುವುದು ಕಷ್ಟದ ಕೆಲಸವೇ. ಹೀಗಿದ್ದರೂ



ಬಹು ಜತನದಿಂದ ರಕ್ಷಣೆ ಮಾಡಿಟ್ಟಿದ್ದಾರೆ. ''ಸುಧಾ' ಓದುವ ಆಸಕ್ತಿ ಯೌವನದಲ್ಲಿಯೇ ಇತ್ತು. ಹೀಗಾಗಿ 'ಸುಧಾ' ಸಂಗ್ರಹಕ್ಕೆ ಮುಂದಾದೆ. ನಾನು ಸಂಗ್ರಹ ಆರಂಭಿಸುವಾಗ ಅದರ ಬೆಲೆ 50 ಪೈಸೆ. ಗ್ರಾಮದಲ್ಲಿ 'ಸುಧಾ' ಏಜೆಂಟರು ಇರಲಿಲ್ಲ. ಹೀಗಾಗಿ ಖರೀದಿಸಲು ಮಡಿಕೇರಿಗೆ ಹೋಗುತ್ತಿದ್ದೆ'' ಎಂದು ಮಾಹಿತಿ ನೀಡುತ್ತಾರೆ ತಿಮ್ಮಪ್ಪಯ್ಯ. 'ಸುಧಾ' ಮೂಲಕ ಅನೇಕರಲ್ಲಿ ಓದುವ ಹವ್ಯಾಸ ಶುರುವಾದ ಅನೇಕ ಉದಾಹರಣೆಯೂ ತಿಮ್ಮಪ್ಪಯ್ಯ ಅವರ ಬಳಿಯಿದೆ. 'ಸುಧಾ'ದಲ್ಲಿ ಪ್ರಕಟವಾಗಿದ್ದ ಮಕ್ಕಳ ಕಥೆಗಳು ಈ ಮನೆಗೆ ಬರುವ ಅನೇಕ ಮಕ್ಕಳು, ಪೋಷಕರಿಗೂ ಆಸಕ್ತಿದಾಯಕ ಓದಿಗೆ ಕಾರಣವಾಗಿದೆ. ತಿಮ್ಮಪ್ಪಯ್ಯ ಅವರ ಈ ಆಸಕ್ತಿ ಶ್ಲಾಘನೀಯ.

— ರೀನಾ ಅನಿಲ್ ಎಚ್., ಮಡಿಕೇರಿ